SOBHA

Date: February 07, 2025

BSE Limited Department of Corporate Services PJ Towers, Dalal Street Mumbai – 400 001 **Scrip Code: 532784 & 890205**	The National Stock Exchange of India Limited Exchange Plaza, Plot No C/1, G Block Bandra Kurla Complex Mumbai – 400 051 **Scrip Code: SOBHA & SOBHAPP**

Dear Sir/Madam,

Sub: Newspaper Advertisement – Unaudited Financial Results for the quarter ended December 31, 2024.

Pursuant to regulation 47 of SEBI (Listing Obligations and Disclosure Requirements) Regulations, 2015, please find attached the copy of the Newspaper Advertisement published by the Company on February 07, 2025, in 'Business Line', English Newspaper and 'Prajavani', Kannada Newspaper, with respect to Unaudited Financial Results for the quarter ended December 31, 2024.

We request you to take the information on record.

Yours sincerely,

FOR SOBHA LIMITED

BIJAN KUMAR DASH Digitally signed by BIJAN KUMAR DASH Date: 2025.02.07 14:59:33 +05'30'

Bijan Kumar Dash
Company Secretary & Compliance Officer
Membership No. ACS 17222

MUMBAI
businessline.
FRIDAY - FEBRUARY 7 - 2025

QUICKLY.

At ₹1,944 crore, NMDC Q3 net profit up 30%

Hyderabad: NMDC has reported a 30 per cent increase in net profit for Q3 FY25. In a statement it said, "The company's PAT rose by 30 per cent, reaching ₹1,944 crore, compared to ₹1,492 crore in the same quarter last year, while the revenue rose to ₹6,531 crore compared to ₹5,410 crore last year." NMDC surpassed its corresponding period last year production and sales volumes in Q3, with production soaring to 13.29 million tonnes and sales reaching 11.94 mt, a growth of 9 per cent and 5 per cent year-on-year (y-o-y), respectively. OUR BUREAU

Manali Petrochemicals records Q3 PAT at ₹5.27 cr

Chennai: Manali Petrochemicals Ltd on Thursday reported a consolidated profit after tax for the October-December 2024 quarter at ₹5.27 crore on the back of macro-economic challenges faced during the quarter, the company said on Thursday.
The PAT for the nine month period ending December 31, 2024 stood at ₹18.51 crore, as against Rs ₹17.91 crore in the year ago period. PTI

IT cos reduce reliance on H-1B visas, explore alternative hubs

OTHER OPTIONS. Firms turn to LATAM countries like Mexico, Argentina and Brazil

Sanjana B
Bengaluru

SHIFT IN STRATEGY. The industry is adapting to a new global workforce model

As US work visa challenges continue reshaping hiring strategies, India's IT companies are reducing their reliance on H-1B visas by shifting to offshoring and nearshoring. As they explore alternative talent hubs in Eastern Europe and Latin America, alongside increased local hiring in the US, the industry is adapting to a new global workforce model, observed analysts.

In his first term in 2017, Donald Trump had taken a stern stance to prevent inexpensive labour from abusing visa programmes, explained Arup Roy, Distinguished VP Analyst at Gartner.

DENIAL OF H-1B

According to the American Immigration Council, during Trump 1.0, the USCIS initially denied more H-1B petitions than in the preceding four years. However, many denials were later overturned, with denial rates decreasing substantially during the latter half of FY20. Denial of new H-1B petitions for initial employment rose from 6 per cent in FY15, to 24 per cent in FY18, before dropping to 21 per cent in FY19, 13 per cent in FY20, 4 per cent in FY21, and only 2 per cent in FY22.

"For IT companies, the H-1B issue was bigger back then because they weren't prepared. However, in these last eight years, they have more or less figured it out through local and near-shore recruitment. They have amped up their recruitment in the US geography and their workforce will now be 25-30 per cent higher in the last 10 years," said Roy. For nearshoring, Eastern European locations tend to be dominant from a delivery location standpoint because of the quality, skilled technical workforce in locations such as Poland, Romania and the Czech Republic. Countries like Ireland are gaining popularity due to low taxes.

LOCAL DELIVERY HUBS

Latin American countries such as Mexico, Argentina, Brazil, and Colombia have also emerged as talent hubs. On the other hand, offshore locations such as India, the Philippines, Vietnam, Malaysia and China, remain. "If the companies are hiring locally in the US, their cost attractiveness goes for a toss. They do not hire in high-cost locations like New York or the Bay Area. Considering the size and scale differences, these companies hire on a mega scale. They look for low-cost locations in regions like Ohio, Georgia, Texas, and Indianapolis, with talent available at a relatively lower cost," he said.

IT companies set up their centres of excellence, or delivery hubs in states where they get support from the local government in terms of tax breaks and infrastructure in exchange for local employment.

During Infosys' Q3 earnings conference call, CFO Jayesh Sanghrajka said, "Our onsite mix has reduced from the 30 per cent rate to 24 per cent. Within that, our nearshore has increased significantly. And within our US onsite population, H1 independent folks are now 60 plus per cent. We have built a resilient model and are confident about where we are versus where we used to be."

PSBs clock record ₹1.29 lakh cr profit in April-Dec FY25: FinMin

KR Srivats
New Delhi

Public sector banks (PSBs) have achieved their highest-ever net profit of ₹1.29 lakh crore in the first nine months (April-December) of FY25, marking a robust 31.3 per cent year-on-year growth. This strong financial performance is underpinned by improved asset quality, healthy credit growth, and adequate capital buffers, reinforcing the sector's resilience and its pivotal role in supporting India's economic expansion.

The net non-performing asset ratio has declined to a record low of 0.59 per cent, with aggregate net NPAs standing at ₹61,252 crore. This is a sharp improvement compared to previous years

FINANCIAL STRENGTH

The remarkable net profit of ₹1,29,426 crore, backed by an aggregate operating profit of ₹2,20,243 crore, underscores the sustained financial strength of PSBs. This performance has been driven by higher net interest income, improved operational efficiencies, and lower provisioning costs due to better asset quality.

The Finance Ministry highlighted that the ongoing policy and process reforms, including enhanced credit discipline, responsible lending practices, and technology-driven governance improvements, have significantly contributed to this growth trajectory.

ASSET QUALITY, NPAs

A key highlight of PSBs' performance is the significant improvement in asset quality. The net non-performing asset (NPA) ratio has declined to a record low of 0.59 per cent, with aggregate net NPAs standing at ₹61,252 crore. This is a sharp improvement compared to previous years when stressed assets were a major concern for the banking sector.

The continuous focus on better risk management practices, stringent recovery mechanisms, and effective resolution of stressed assets under the Insolvency and Bankruptcy Code (IBC) framework have played a crucial role in reducing bad loans. The strong provisioning buffers and disciplined credit underwriting have further strengthened balance sheets, allowing banks to expand their lending without the overhang of legacy bad debts.

STRONG CREDIT

The aggregate business of PSBs has grown by 11 per cent y-o-y, reaching ₹242.27 lakh crore. This is supported by improved deposit growth of 9.8 per cent and a healthy credit expansion of 12.4 per cent. Key lending segments driving this growth include retail credit up 16.6 per cent, driven by demand for housing, personal, and auto loans; agriculture creditgrew 12.9 per cent, reflecting the government's push for rural financing and MSME credit expanded 12.5 per cent, highlighting banks' role in supporting small businesses.

This broad-based credit expansion highlights PSBs' growing role in fueling economic activity across various sectors, including infrastructure, manufacturing, and services.

ADEQUATE CAPITAL

PSBs have also maintained a healthy capital position, with an aggregate capital to risk-weighted assets ratio (CRAR) of 14.83 per cent—significantly above the regulatory requirement of 11.5 per cent. This ensures that banks are well-equipped to meet future credit demand while maintaining financial stability.

The Finance Ministry emphasised that PSBs are adequately capitalised and well-positioned to support India's growth ambitions, particularly in priority sectors such as agriculture, MSMEs, and infrastructure. The government's continued focus on governance reforms, financial inclusion, and digital banking adoption has further strengthened the banking sector's foundation.

GROWTH MOMENTUM

With record profitability, improved asset quality, and robust credit growth, PSBs are on a strong footing to drive economic expansion in the coming quarters. The policy-driven structural improvements and disciplined lending practices are expected to ensure sustained financial health, making PSBs a crucial pillar of India's economic growth story, banking industry observers said.

India, Netherlands may tie up for research to use lab-grown diamonds in semiconductors production: MeitY Secretary

Our Bureau
New Delhi

India and the Netherlands can collaborate in research for using lab-grown diamonds to produce semiconductors, S Krishnan, Secretary, Ministry of Electronics and Information Technology, said on Thursday.

Addressing the CII Indo-Dutch Tech Summit, he said that the traditional business of lab-grown diamonds provides a common linkage between the Netherlands, Belgium and India's Surat district.

"People now believe that diamond and lab-grown diamonds themselves can be a very useful substrate for semiconductors. Some of it is also based in the Netherlands, and some of it, of course, based in India and Surat and other places," Krishnan said.

Krishnan said that the way lab-grown diamonds can actually be sliced is something very similar to the space of growing silicon carbide crystals and other crystals used in the manufacturing of semiconductors.

He highlighted that in India most of the research expenditure has been taken up by the government and industry, but the country hasn't met those goals primarily because most of the companies are engaged in providing services.

LIMITED PROGRESS

While India's electronics production has grown multifold to ₹9.52 lakh crore in 2023-24 from ₹1.9 lakh crore in 2014-15, the Economic Survey report tabled in Parliament last week noted that there has been limited progress in design and component manufacturing by the industry. Krishnan suggested that if the industry comes up with its own money then the government is willing to provide exclusive rights for use of that technology.

"We have actually more than doubled our research budget. We were spending about ₹500 crore a year, roughly about $70-80 million. Now we are all the way up to about more than $150 million in terms of research funding every year. Our goal of spending this money is more oriented towards ensuring that it goes to industry-supported projects," he said.

'ಸಖಿ ಸಾರಥಿ' ಚಾಲನಾ ತರಬೇತಿಗೆ ಚಾಲನೆ ನೀಡಿದ ಉಮಾ ಮಹಾದೇವನ್

'ಸ್ವಚ್ಛವಾಹಿನಿ' ಮಹಿಳೆಯರೇ ಚಲಾಯಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದಲ್ಲಿ ಕಸ ವಿಲೇವಾರಿ ಮಾಡುವ ವಾಹನ 'ಸ್ವಚ್ಛ ವಾಹಿನಿ'ಯನ್ನು ಮಹಿಳೆಯರೇ ಚಲಾಯಿಸುವಂತಾಗಬೇಕು. ಎಲ್ಲ ಪಂಚಾಯಿತಿಗಳು ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್ ಸೂಚಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಗುರುವಾರ ಹಮ್ಮಿಕೊಂಡಿದ್ದ 'ಸಖಿ ಸಾರಥಿ–ಸ್ವಾವಲಂಬನೆಯೆಡೆಗೆ ಮೊದಲ ಹೆಜ್ಜೆ' ಸ್ವಸಹಾಯ ಗುಂಪಿನ ಮಹಿಳೆಯರಿಗೆ ಲಘು ಮತ್ತು ಭಾರಿ ವಾಹನಗಳ ಚಾಲನಾ ತರಬೇತಿ ನೀಡುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೂರು ವರ್ಷದ ಹಿಂದೆ 'ಸ್ವಚ್ಛ ವಾಹಿನಿ' ಚಲಾಯಿಸಲು ಒಬ್ಬರೂ ಮಹಿಳೆಯರು ಇರಲಿಲ್ಲ. 5,000 ಮಹಿಳೆಯರಿಗೆ ಚಾಲನಾ ತರಬೇತಿ ನೀಡಿದ್ದರಿಂದ 3,500 ಮಹಿಳೆಯರು 'ಸ್ವಚ್ಛ ವಾಹಿನಿ' ಚಲಾಯಿಸುತ್ತಿದ್ದಾರೆ.

ನಗರ ಜಿಲ್ಲಾ ಪಂಚಾಯಿತಿ ಆಯೋಜಿಸಿದ್ದ ಸಖಿ ಸಾರಥಿ–ಸ್ವಾವಲಂಬನೆಯಡೆಗೆ ಮೊದಲ ಹೆಜ್ಜೆ: ಲಘು, ಭಾರಿ ವಾಹನ ಚಾಲನಾ ತರಬೇತಿ, ವಿವಿಧ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಆರೋಗ್ಯ ಶಿಬಿರ ಮತ್ತು ಸಿರಿಧಾನ್ಯ ಮೇಳದಲ್ಲಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತೆ ಉಮಾ ಮಹಾದೇವನ್ ಮತ್ತು ಸಿಇಒ ಕೆ.ಎಸ್.ಲತಾ ಕುಮಾರಿ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ವೀಕ್ಷಿಸಿದರು

ಪ್ರತಿ ಪಂಚಾಯಿತಿಯಲ್ಲಿ ಮಹಿಳೆಯರೇ ಚಾಲಕರಾಗಬೇಕು ಎಂದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (ಎಂ-ನರೇಗಾ) ಮೂರು ವರ್ಷದ ಹಿಂದೆ ಶೇಕಡ 47ರಷ್ಟು ಮಹಿಳೆಯರಿದ್ದರು. ಈಗ ಶೇ 54ರಷ್ಟು ಇದ್ದಾರೆ. ಪುರುಷರು ದೂರದ ಊರಿಗೆ ಹೋಗಿ ಕೆಲಸ ಮಾಡಲು ಅವಕಾಶ ಇರುತ್ತದೆ. ಮಹಿಳೆಯರು ಹೆಚ್ಚಿನ ಬಾರಿ ತಮ್ಮೂರಿನಲ್ಲೇ ಇರಬೇಕಾಗುತ್ತದೆ. ಊರಲ್ಲಿದ್ದುಕೊಂಡೇ ಕೆಲಸ ಮಾಡಲು ಎಂ-ನರೇಗಾ ಉಪಯೋಗವಾಗುತ್ತದೆ ಎಂದು ತಿಳಿಸಿದರು.

ಸಂವಿಧಾನದ ಆಶಯದಂತೆ ಎಲ್ಲರೂ ಸಮಾನರಾಗಬೇಕಿದ್ದರೆ ಮಹಿಳೆಯರಿಗೆ ಪ್ರೋತ್ಸಾಹ ಸಿಗಬೇಕು. ಕನ್ನಡ ನಾಡು ಸರ್ವಜನಾಂಗದ ಶಾಂತಿಯ ತೋಟವಾಗಬೇಕಿದ್ದರೆ ಪರಿಸರ ಸ್ವಚ್ಛವಾಗಿರಬೇಕು. ಹಸಿರು ಉಳಿಯಬೇಕು. ಮಹಿಳೆಯರು ಧೈರ್ಯದಿಂದ ಮುನ್ನುಗ್ಗಿ ಸಂವಿಧಾನದ ಆಶಯದಂತೆ ಕೆಲಸ ಮಾಡಬೇಕು. ಆಗ ಸಮಾನತೆ ಬರಲು ಸಾಧ್ಯ. ಹಳ್ಳಿಗಳಲ್ಲಿ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡಿದರೆ ಭಾರತ ಸಂವಿಧಾನ ಗಟ್ಟಿಯಾಗುತ್ತದೆ ಎಂದು ವಿಶ್ಲೇಷಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲತಾ ಕುಮಾರಿ ಕೆ.ಎಸ್. ಮಾತನಾಡಿ, 'ಚಾಲನಾ ಕ್ಷೇತ್ರದಲ್ಲಿ ಸಮಾನತೆ ಮರೀಚಿಕೆಯಾಗಿದೆ. ಒಟ್ಟು ಶೇ 6.8ರಷ್ಟು ಮಹಿಳೆಯರು ಮಾತ್ರ ನಾಲ್ಕು ಚಕ್ರದ ವಾಹನಗಳನ್ನು ಓಡಿಸುವ ಚಾಲನಾ ಪರವಾನಗಿ ಹೊಂದಿದ್ದಾರೆ. ಅದರಲ್ಲಿ ವಾಣಿಜ್ಯ ವಾಹನಗಳನ್ನು ಚಲಾಯಿಸುವ ಮಹಿಳೆಯರ ಪ್ರಮಾಣ ಶೇ 1ರಷ್ಟು ಮಾತ್ರ ಇದೆ' ಎಂದು ಬೇಸರಿಸಿದರು.

ವಿವಿಧ ಸ್ವಸಹಾಯ ಗುಂಪುಗಳಿಂದ 160ಕ್ಕೂ ಅಧಿಕ ಮಹಿಳೆಯರು ಚಾಲನಾ ತರಬೇತಿ ಪಡೆಯಲಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆರು ಸ್ವಚ್ಛವಾಹಿನಿ ಚಾಲಕರಾಗಲು ಎಲ್ಲ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಒ) ಕ್ರಮ ಕೈಗೊಳ್ಳಬೇಕು. ಯಾರಿಗಾದರೂ ಕಷ್ಟವಾಗುವುದಿದ್ದರೆ ಎರಡನೇ ಬಾರಿ ತರಬೇತಿ ನೀಡಿ ಅವರನ್ನು ಪಿಡಿಒಗಳು ಸಜ್ಜುಗೊಳಿಸಬೇಕು ಎಂದು ಸಲಹೆ ನೀಡಿದರು.

ವಿವಿಧ ಸ್ವಸಹಾಯ ಗುಂಪುಗಳು ತಯಾರಿಸಿದ್ದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಆರೋಗ್ಯ ಶಿಬಿರ ಮತ್ತು ಸಿರಿಧಾನ್ಯ ಮೇಳ ನಡೆಯಿತು.

1,122 ಗಾಯಕರಿಂದ 'ವಚನ ಗಾಯನ ವೈಭವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಗ ಸಂಸ್ಥಾನದ ವತಿಯಿಂದ 1,122 ಗಾಯಕರಿಂದ 'ವಚನ ಗಾಯನ ವೈಭವ'ವನ್ನು ಫೆಬ್ರುವರಿ 7ರಂದು ಆಯೋಜಿಸಲಾಗಿದೆ.

ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ಬಯಲು ರಂಗ ಮಂದಿರದಲ್ಲಿ ನಡೆಯುವ 'ವಚನ ಗಾಯನ ವೈಭವ'ದಲ್ಲಿ ಹನ್ನೊಂದು ವಚನಗಳನ್ನು ಏಕಕಾಲದಲ್ಲಿ ಸಮೂಹ ಗಾಯನದ ಮೂಲಕ ಪ್ರಸ್ತುತಪಡಿಸಲಾಗುತ್ತದೆ ಎಂದು ರಂಗ ಸಂಸ್ಥಾನದ ಅಧ್ಯಕ್ಷ ಬಂಡ್ಲಹಳ್ಳಿ ವಿಜಯಕುಮಾರ ತಿಳಿಸಿದ್ದಾರೆ.

ವಚನಗಳಿಗೆ ಎಚ್.ಕೆ. ನಾರಾಯಣ, ವಿಜಯಕುಮಾರ, ವೆಂಕಟೇಶ್ ಅಲ್ಕೋಡ್ ಹಾಗೂ ಅರ್ಚನಾ ಭೋಜ್ ಅವರು ರಾಗ ಸಂಯೋಜನೆ ಮಾಡಿದ್ದಾರೆ. ತರಳಬಾಳು ಶಾಖಾ ಮಠದ ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ಅವರು ಹೇಳಿದ್ದಾರೆ.

ಹೂಡಿಕೆದಾರರ ಸಮಾವೇಶ 19 ದೇಶಗಳು ಭಾಗಿ

ಪ್ರಜಾವಾಣಿ ವಾರ್ತೆ

ಎಂ.ಬಿ.ಪಾಟೀಲ

ಬೆಂಗಳೂರು: ಫೆ. 11ರಿಂದ 14ರವರೆಗೆ ನಡೆಯುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ 19 ದೇಶಗಳು ಭಾಗವಹಿಸಲಿವೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಫ್ರಾನ್ಸ್, ನೆದರ್‌ಲೆಂಡ್, ಜಪಾನ್, ಥಾಯ್ಲೆಂಡ್, ಮಲೇಷ್ಯಾ, ದಕ್ಷಿಣ ಕೊರಿಯಾ, ಇಸ್ರೇಲ್, ನಾರ್ವೆ, ಸ್ವಿಟ್ಜರ್‌ಲೆಂಡ್, ತೈವಾನ್, ಜರ್ಮನಿ, ಆಸ್ಟ್ರೇಲಿಯಾ, ಡೆನ್ಮಾರ್ಕ್, ಪೋಲೆಂಡ್, ಇಟಲಿ, ಬ್ರಿಟನ್, ಸ್ಲೊವೇನಿಯಾ, ಬೆಲಾರಸ್ ಮತ್ತು ಸಿಂಗಪುರ ಭಾಗವಹಿಸಲಿವೆ.

ಏರೋಸ್ಪೇಸ್, ನವೀಕರಿಸಬಹುದಾದ ಇಂಧನ, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್ ಮತ್ತು ಅತ್ಯಾಧುನಿಕ ತಯಾರಿಕೆ ವಲಯಗಳಲ್ಲಿ ಕರ್ನಾಟಕ ಬಂಡವಾಳ ಹೂಡಿಕೆಗೆ ಮುಂಚೂಣಿಯಲ್ಲಿದೆ. ಈ ಅಂಶವನ್ನು ಜಾಗತಿಕ ಉದ್ಯಮ ಜಗತ್ತಿಗೆ ಸಮಾವೇಶದ ಮೂಲಕ ಪರಿಚಯಿಸಲಾಗುತ್ತಿದೆ ಎಂದಿದ್ದಾರೆ.

'ಪರಿಸರಸ್ನೇಹಿ ವಿದ್ಯುತ್ ಚಾಲಿತ ವಾಹನಗಳು, ರಕ್ಷಣೆ, ಜೈವಿಕ ತಂತ್ರಜ್ಞಾನ, ಸಂಶೋಧನೆ ಹಾಗೂ ಅಭಿವೃದ್ಧಿ ಮತ್ತು ಗರಿಷ್ಠ ನಿಖರತೆಯ ಬಿಡಿಭಾಗ ತಯಾರಿಕಾ ವಲಯಗಳಲ್ಲಿನ ಬೆಳವಣಿಗೆಯ ಮೇಲೆ ಅವಿಷ್ಕಾರದ ಭವಿಷ್ಯದ ಮೇಲೆ ಬೆಳಕು ಚೆಲ್ಲಲಿದೆ. ರಾಜ್ಯದ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು (ಎಂಎಸ್‌ಇ) ಹಾಗೂ ನವೋದ್ಯಮ ಬೆಳವಣಿಗೆಗೆ ವೇಗ ನೀಡಲಿದೆ. ಡಿಜಿಟಲೀಕರಣ ಅಳವಡಿಸಿಕೊಳ್ಳಲು 2,000ಕ್ಕೂ ಹೆಚ್ಚು ಎಸ್‌ಎಂಇಗಳಿಗೆ ತರಬೇತಿ ನೀಡಲಾಗಿದೆ. ಡಿಜಿಟಲ್ ಪರಿವರ್ತನೆಗಾಗಿ 100 ಎಸ್‌ಎಂಇಗಳಿಗೆ ಅಗತ್ಯ ನೆರವು ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

'ಮೂಲ ಸಲಕರಣೆ ತಯಾರಿಸುವ (ಒಇಎಂ) ದೊಡ್ಡ ಕಂಪನಿಗಳ ಜತೆಗೆ ವಹಿವಾಟು ಕುದುರಿಸಿಕೊಳ್ಳಲು ಎಸ್‌ಎಂಇಗಳಿಗೆ ನೆರವಾಗಲು ಕೃತಕ ಬುದ್ಧಿಮತ್ತೆ ಆಧಾರಿತ ಅಂತರ್ಜಾಲ ತಾಣ ಅಭಿವೃದ್ಧಿಪಡಿಸಲಾಗಿದೆ. ಬಂಡವಾಳ ಹೂಡಿಕೆ ಸುಲಲಿತಗೊಳಿಸಲು ಕೃತಕ ಬುದ್ಧಿಮತ್ತೆ ನೆರವಿನ ಏಕಗವಾಕ್ಷಿ ವ್ಯವಸ್ಥೆ ಅಭಿವೃದ್ಧಿಪಡಿಸಲಾಗಿದೆ. ಇದು ಭೂಮಿ ಹಂಚಿಕೆ, ಹೂಡಿಕೆದಾರರ ಕುಂದುಕೊರತೆ ನಿವಾರಣೆಗೆ ನೆರವಾಗಲಿದೆ' ಎಂದಿದ್ದಾರೆ.

'ಬಿಲ್ ಪಾವತಿ: ಸಚಿವರ ಗಮನಕ್ಕೆ ಬಾರದೇ ಅಕ್ರಮ ನಡೆಯಿತೆ?'

ಪ್ರಜಾವಾಣಿ ವಾರ್ತೆ

ತ್ಯಾಜ್ಯ ವಿಲೇವಾರಿ ಅಕ್ರಮ

ಬೆಂಗಳೂರು: ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಮೂರು ವರ್ಷಗಳಿಂದ ಘನ ತ್ಯಾಜ್ಯ ವಿಲೇವಾರಿ ಗುತ್ತಿಗೆಯಲ್ಲಿ ₹2.37 ಕೋಟಿ ಮೊತ್ತದ ನಕಲಿ ಬಿಲ್ ಸೃಷ್ಟಿಸಿ, ಹಣ ಪಡೆದ ಪ್ರಕರಣದ ಕುರಿತು ತನಿಖೆಗೆ ಆದೇಶಿಸಲಾಗಿದೆ. ಆದರೆ, ಈ ಕ್ಷೇತ್ರದ ಸ್ಥಳೀಯ ಶಾಸಕರೂ ಆಗಿರುವ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ಗಮನಕ್ಕೆ ಬಂದಿಲ್ಲ ಎಂದರೆ ನಂಬಲು ಸಾಧ್ಯವಿಲ್ಲ ಎಂದು ಬಿಜೆಪಿ ರಾಜ್ಯ ವಕ್ತಾರ ಪ್ರಕಾಶ್ ಹೇಳಿದ್ದಾರೆ.

'ಸ್ಥಳೀಯ ಶಾಸಕರ ಗಮನಕ್ಕೆ ಬರದೇ ಯಾವುದೇ ಬಿಲ್ ಪಾವತಿ ಆಗುವುದಿಲ್ಲ. ದಿನೇಶ್ ತಪ್ಪು ಮಾಹಿತಿ ನೀಡುತ್ತಿದ್ದಾರೆ' ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ತಮ್ಮ ಕ್ಷೇತ್ರದಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಆಗುತ್ತಿದೆಯೇ? ಜನರಿಗೆ ಸಮಸ್ಯೆ ಆಗುತ್ತಿದೆಯೇ ಎಂಬುದರ ಬಗ್ಗೆ ಗಮನ ಕೊಡದೇ ಕರ್ತವ್ಯದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಈ ಹಗರಣಕ್ಕೆ ಸಂಬಂಧಿಸಿದಂತೆ ಸರ್ಕಾರವು ಬಿಬಿಎಂಪಿ ವಿಶೇಷ ಕಮಿಷನರ್ ವಿಕಾಸ್ ಕಿಶೋರ್ ಅವರನ್ನು ತನಿಖೆಗೆ ನೇಮಿಸಿದೆ. ಅಧಿಕಾರಿಗಳು ಕೈಜೋಡಿಸದೇ ಗುತ್ತಿಗೆದಾರ ಇಷ್ಟು ದೊಡ್ಡ ಮೊತ್ತ ಪಡೆಯಲು ಸಾಧ್ಯವಿಲ್ಲ ಎಂದೂ ಅವರು ದೂರಿದರು.

ಕ್ಷೇತ್ರದ ವ್ಯಾಪ್ತಿಯಲ್ಲಿ ಇತ್ತೀಚೆಗೆ ಗೇಟ್ ಬಿದ್ದು ಮಗು ಸತ್ತು ಹೋಗಿದೆ. ಕಳಪೆ ಕಾಮಗಾರಿಯಿಂದ ಈ ರೀತಿ ಆಗಿದೆ. ಗುತ್ತಿಗೆದಾರರ ವಿರುದ್ಧ ಪ್ರಕರಣ ದಾಖಲಿಸಿಲ್ಲ. ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಕಳಪೆ ಕಾಮಗಾರಿ ವ್ಯಾಪಕವಾಗಿದೆ. ತಮ್ಮ ಮೂಗಿನಡಿ ನಡೆಯುವ ಅವ್ಯವಹಾರಗಳ ಬಗ್ಗೆಯೂ ಕೂಡ ದಿನೇಶ್ ಗುಂಡೂರಾವ್ ಅವರು ಗಮನಿಸದೆ ಇರುವುದು ಶೋಚನೀಯ ಎಂದರು.

ಬಿಜೆಪಿ ರಾಜ್ಯ ಘಟಕದ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ್, ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಸಮಿತಿ ಅಧ್ಯಕ್ಷ ಸಪ್ತಗಿರಿಗೌಡ, ಉತ್ತರ ಜಿಲ್ಲಾ ಸಮಿತಿ ಅಧ್ಯಕ್ಷ ಹರೀಶ್ ಪತ್ರಿಕಾಗೋಷ್ಠಿಯಲ್ಲಿದ್ದರು.

ವಾದ್ಯಗಾರರಿಗೆ ಶಿವಲಿಂಗ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಪುನೀತ್ ಕುಮಾರ್ ಎ.ಮಹೇಂದ್ರ ಗುರುರಾಜ ಆಚಾರ್ಯ

ಬೆಂಗಳೂರು: ವಚನಜ್ಯೋತಿ ಬಳಗದ ಸಂಸ್ಥಾಪಕ ಕೆ.ಪಿ. ಶಿವಲಿಂಗಯ್ಯನವರ ಸ್ಮರಣೆಯಲ್ಲಿ ನೀಡುವ 'ಶಿವಲಿಂಗ ಪ್ರಶಸ್ತಿ'ಯನ್ನು ಮೂವರು ವಾದ್ಯಗಾರರಿಗೆ ಪ್ರಕಟಿಸಲಾಗಿದೆ.

ಕೀಬೋರ್ಡ್ ವಾದಕ ಪುನೀತ್ ಕುಮಾರ್, ತಬಲಾ ವಾದಕ ಗುರುರಾಜ ಆಚಾರ್ಯ, ರಿದಂ ಪ್ಯಾಡ್ ವಾದಕ ಎ. ಮಹೇಂದ್ರ ಅವರಿಗೆ 'ಶಿವಲಿಂಗ ಪ್ರಶಸ್ತಿ- 2025' ಪ್ರಕಟಿಸಲಾಗಿದೆ. ಪ್ರಶಸ್ತಿಯು ₹10 ಸಾವಿರ ನಗದು, ವಸ್ತ್ರ, ಸ್ಮರಣಿಕೆಯನ್ನು ಒಳಗೊಂಡಿದೆ ಎಂದು ವಚನಜ್ಯೋತಿ ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದ್ದಾರೆ.

ವಚನ ಸಂಗೀತಕ್ಕೆ ಜೊತೆಯಾಗಿ ವಚನಗಳನ್ನು ಮನ ಮನಕ್ಕೆ ತಲುಪಿಸುತ್ತಿರುವುದನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಫೆಬ್ರುವರಿ 14ರ ಸಂಜೆ 4 ಗಂಟೆಗೆ ರವೀಂದ್ರ ಕಲಾಕ್ಷೇತ್ರದ ಸಂಸ ಬಯಲು ರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ 'ವಚನ ರಸದೌತಣ' ಸಂಚಿಕೆಯೂ ಬಿಡುಗಡೆಯಾಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

10ಕ್ಕೆ ಬ್ರಹ್ಮರಥೋತ್ಸವ

ಬೆಂಗಳೂರು: 'ವಿಶ್ವಕರ್ಮ ಸೇವಾ ಸಮಿತಿಯಿಂದ 42ನೇ ವರ್ಷದ ಭಗವಾನ್ ವಿಶ್ವಕರ್ಮ ಬ್ರಹ್ಮ ರಥೋತ್ಸವ ಮತ್ತು ವಿಶ್ವಕರ್ಮ ಜನ ಜಾಗೃತಿ ಸಮಾವೇಶವನ್ನು ಇದೇ 10ರಂದು ನಗರದಲ್ಲಿ ಆಚರಿಸಲಾಗುತ್ತಿದೆ' ಎಂದು ವಿಶ್ವಕರ್ಮ ಸೇವಾ ಸಮಿತಿ ಅಧ್ಯಕ್ಷ ಆರ್. ಮಧುಸೂದನ್ ತಿಳಿಸಿದ್ದಾರೆ.

ರೊಬೊಟಿಕ್ ಶಸ್ತ್ರಚಿಕಿತ್ಸೆಯಿಂದ ಶೀಘ್ರ ಚೇತರಿಕೆ: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಪ್ರದಾಯಿಕ ವಿಧಾನದ ಬದಲು, ರೊಬೊಟಿಕ್ ತಂತ್ರಜ್ಞಾನ ಆಧಾರಿತ ಮಂಡಿಚಿಪ್ಪು ಬದಲಿ ಶಸ್ತ್ರ-ಚಿಕಿತ್ಸೆಗೆ ಒಳಗಾದ್ದರಿಂದ ಶೀಘ್ರ ಚೇತರಿಸಿಕೊಳ್ಳಲು ಸಾಧ್ಯವಾಯಿತು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಗುರುವಾರ ಇಲ್ಲಿನ ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ತಮಗಾದ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆ ಅವಧಿಯ ಅನುಭವವನ್ನು ಹಂಚಿಕೊಂಡರು.

'ಕೆಲ ದಿನಗಳಿಂದ ಮೊಣಕಾಲಿನ ನೋವು ಕಾಡುತ್ತಿತ್ತು. ಮೆಟ್ಟಿಲುಗಳನ್ನು ಹತ್ತಲು ಸಹ ಸಾಧ್ಯವಾಗುತ್ತಿರಲಿಲ್ಲ. ಯಾವುದೇ ತೈಲ ಹಚ್ಚಿದರೂ ಪ್ರಯೋಜನ ಕಾಣಲಿಲ್ಲ. ನಂತರ ಸ್ನೇಹಿತರ ಸಲಹೆಯಂತೆ ಫೋರ್ಟಿಸ್ ಆಸ್ಪತ್ರೆಯಲ್ಲಿ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಗಾದೆ. ನನ್ನ ನಿರೀಕ್ಷೆಗೂ ಮೀರಿ ಅಲ್ಪಾವಧಿಯಲ್ಲಿಯೇ ಚೇತರಿಕೆ ಕಂಡಿದ್ದೇನೆ. ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಗಾಗುವವರು ರೊಬೊಟಿಕ್ ತಂತ್ರಜ್ಞಾನ ಆಧಾರಿತ ಶಸ್ತ್ರಚಿಕಿತ್ಸೆಯನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ' ಎಂದು ಹೇಳಿದರು.

ರಾಮಲಿಂಗಾರೆಡ್ಡಿ

ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಅಧ್ಯಕ್ಷ ಡಾ.ವಿ.ವಿ. ಚಿನಿವಾಲರ್, 'ನಾನೂ ಸಹ ಮಂಡಿಚಿಪ್ಪು ಬದಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟು, ಚೇತರಿಸಿಕೊಂಡಿದ್ದೇನೆ. ವೈದ್ಯಕೀಯ ಲೋಕಕ್ಕೆ ರೊಬೊಟಿಕ್ ತಂತ್ರಜ್ಞಾನದ ಆಗಮನವು ರೋಗಿಗಳಿಗೆ ಅನುಕೂಲಕರವಾಗಿದೆ' ಎಂದು ಹೇಳಿದರು.

ಫೋರ್ಟಿಸ್ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸೆ ವಿಭಾಗದ ಡಾ.ನಾರಾಯಣ್ ಹುಲ್ಸೆ ಅವರು ಮಾತನಾಡಿ, 'ರೊಬೊಟ್ ನೆರವು ವೈದ್ಯ ಲೋಕದಲ್ಲಿ ಹೊಸ ಅಧ್ಯಾಯ ಸೃಷ್ಟಿಸಿದೆ. ಮೊಣಕಾಲು, ಸೊಂಟ ಇತರೆ ಕೀಲು ಬದಲಾವಣೆಯಂತಹ ಶಸ್ತ್ರಚಿಕಿತ್ಸೆಗಳಲ್ಲಿ ರೊಬೊಟಿಕ್ ತಂತ್ರಜ್ಞಾನವು ನಿಖರ ಶಸ್ತ್ರಚಿಕಿತ್ಸೆಗೆ ನೆರವಾಗಲಿದೆ' ಎಂದು ತಿಳಿಸಿದರು.

ಫೆ. 9ಕ್ಕೆ ಪುರಂದರ, ತ್ಯಾಗರಾಜರ ಆರಾಧನೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಗುರುಗುಹ ಸಂಗೀತ ಮಹಾವಿದ್ಯಾಲಯದ ಬೆಂಗಳೂರಿನ 10 ಉಪ ಶಾಖೆಗಳಲ್ಲಿ ಫೆಬ್ರುವರಿ 9ರಂದು ಪುರಂದರ ದಾಸರ ಹಾಗೂ ತ್ಯಾಗರಾಜರ ಆರಾಧನಾ ಮಹೋತ್ಸವ ನಡೆಯಲಿದೆ.

ಕೆಂಗೇರಿ ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿರುವ ಓಂಕಾರ ಆಶ್ರಮದಲ್ಲಿ ಫೆ. 9ರ ಬೆಳಿಗ್ಗೆ 7.30ರಿಂದ ಪ್ರಾಕಾರ ಸಂಕೀರ್ತನೆ ನಡೆಯಲಿದೆ. ನಂತರ ಓಂಕಾರ ಆಶ್ರಮದ ಮಧುಸೂಧನಾನಂದ ಪುರಿ ಸ್ವಾಮೀಜಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಬೆಳಿಗ್ಗೆ 9.30ರಿಂದ ಮಹಾವಿದ್ಯಾಲಯದ ಕಿರಿಯ ವಿದ್ಯಾರ್ಥಿಗಳಿಂದ ಗೋಷ್ಠಿ ಗಾಯನ, ಹಿರಿಯ ವಿದ್ಯಾರ್ಥಿಗಳಿಂದ ವಿವಿಧ ಪಂಚರತ್ನ ಕೃತಿಗಳಲ್ಲಿ ಆಯ್ದ ಕೃತಿಗಳ ಗೋಷ್ಠಿ ಗಾಯನ ನಡೆಸಿಕೊಡಲಿದ್ದಾರೆ. ಮಧ್ಯಾಹ್ನ 2ರಿಂದ ಮಹಾವಿದ್ಯಾಲಯದ ಕಿರಿಯ ವಿದ್ಯಾರ್ಥಿಗಳಿಂದ ಗೋಷ್ಠಿ ಗಾಯನ, ಶಿಬಿರಾರ್ಥಿಗಳಿಂದ ದೇವರ ನಾಮಗಳ ಗೋಷ್ಠಿ ಗಾಯನ ಆಯೋಜಿಸಲಾಗಿದೆ. ವಿದ್ವಾನ್ ಮೈಸೂರು ಪಿ.ಎಸ್. ಶ್ರೀಧರ್ ಹಾಗೂ ವಿದ್ವಾನ್ ನಿಖಿಲ್ ಕುಮಾರ್ ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.